ಸರಕಾರಿ ಬಸ್ಸುಗಳಲ್ಲಿ ಸ್ವಾತಂತ್ರ್ಯ ಯೋಧರುಗಳಿಗೆ ಉಚಿತ ಪ್ರಯಾಣ ಸೌಲಭ್ಯ ತೀವ್ರ ಪರಿಶೀಲನೆಯಲ್ಲಿದೆ ಸ್ವಾತಂತ್ರ್ಯ ಯೋಧರ ಹೆಣ್ಣು ಮಕ್ಕಳ ವಿವಾದಕ್ಕೆ ಆರ್ಥಿಕ ನೆರವು ನೀಡುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರ ಶಿಫಾರಸ್ಸಿನ ಮೇಲೆ ತಮ್ಮ ವಿವೇಚನಾ ನಿಧಿಯಿಂದ ಆರ್ಥಿಕ ನೆರವನ್ನು ನೀಡುತ್ತಿದ್ದಾರೆ.

(೭) ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕು ಕವಿತಾಳ ಗ್ರಾಮಕ್ಕೆ ಬೇಟಿ ನೀಡಿದಾಗ ರಾಜ್ಯದ ರಾಜ್ಯ ಸಚಿವರಿಗೆ ಹೂಮಾಲೆ ಹಾಕಿದಾಗ ನಡೆದ ಘಟನೆಯ ಬಗ್ಗೆ

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ)—ಮಾನ್ಯ ಅಧ್ಯಕ್ಷರೆ, ರಾಯಚೂರು ಜಿಲ್ಲೆ ಮಾನ್ವಿ ತಾಲೂಕು, ಕವಿತಾಳ ಗ್ರಾಮಕ್ಕೆ ರಾಜ್ಯದ, ರಾಜ್ಯ ಸಚಿವರೊಬ್ಬರು ಭೇಟಿ ನೀಡಿದ್ದಾಗ ಸಚಿವರಿಗೆ ಹೂಮಾಲೆ ಅರ್ಪಿಸಲು ಹೋದ ಹಿಂದುಳಿದ ಜಾತಿಯ ಯುವಕನೊಬ್ಬನನ್ನು ಮಂತ್ರಿಗಳ ಕಡೆಯವರು ವೇದಿಕೆಯ ಮೇಲೆಯೇ ಮಂತ್ರಿಗಳು ಮತ್ತು ಸಭಿಕರ ಎದುರಿನಲ್ಲಿಯೇ ತಳ್ಳಿಸಿದ್ದಾರೆ. ಇದಕ್ಕೆ ಕಾರಣ ಏನು ? ಅಲ್ಲಿಯೇ ಇದ್ದ ಪೋಲೀಸ್‌ನವರೂ ಈ ಘಟನೆಯನ್ನು ಕಣ್ಣಾರೆ ಕಂಡರೂ ಸಹ ಸಂಬಂಧಪಟ್ಟವರ ಮೇಲೆ ಕೇಸು ದಾಖಲು ಮಾಡಿಕೊಳ್ಳದೆ ಹೊಡೆಸಿಕೊಂಡ ಯುವಕನನ್ನು ಪೋಲೀಸರು ಎಳೆದುಕೊಂಡು ಹೋಗಿ ಎರಡು ದಿವಸ ಅವರೊಂದಿಗೆ ಇಟ್ಟುಕೊಂಡಿದ್ದು ಮೂರನೇ ದಿವಸ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದ್ದಾರೆ. ಯಾವ ಅಪರಾಧವನ್ನೂ ಮಾಡದ ಈ ಯುವಕನಿಗೆ ಈ ರೀತಿ ಪೋಲೀಸರು ಶಿಕ್ಷೆಕೊಟ್ಟಿದ್ದನ್ನು ಕಂಡ ಆ ಪ್ರದೇಶದ ಜನ ಮಂತ್ರಿಗಳು ಮತ್ತು ಪೋಲೀಸರ ಬಗ್ಗೆ ಭಯಭೀತರಾಗಿದ್ದಾರೆ. ರಕ್ಷಿಸುವವರೇ ಭಕ್ಷಿಸುವವರಾದರೆ ಮತ್ತೆ ಯಾರಲ್ಲಿ ಮೊರೆ ಹೋಗಬೇಕು ಆದ್ದರಿಂದ ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂಬುದರ ಬಗ್ಗೆ ಗೃಹಸಚಿವರು ಹೇಳಿಕೆ ನೀಡಬೇಕಾಗಿ ಒತ್ತಾಯಿಸುತ್ತೇನೆ.

(ಗೊಂದಲ)

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು)—ಮಾನ್ಯ ಅಧ್ಯಕ್ಷರೆ, ತಾರೀಖು ೨೮-೭-೧೯೮೬ ರಂದು ೬ ಗಂಟೆ ಸಮಯದಲ್ಲಿ ರಾಯಚೂರು ಜಿಲ್ಲೆಯ ಕವಿತಾಳದಲ್ಲಿ ವಿದ್ಯಾರ್ಥಿಗಳ ಹಾಸ್ಟೆಲ್‌ನ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷರು ಕವಿತಾಳಿನ ಬಸವರಾಜಪ್ಪನವರು. ಮುಖ್ಯ ಅತಿಥಿಯಾಗಿ ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಸಚಿವರಾದ ಶ್ರೀಮಾನ್ ಬಸವರಾಜ ಪಾಟೀಲ್ ಆನ್ವರಿಯವರು ಹಾಜರಿದ್ದರು. ಮಾಲಾರ್ಪಣ ಸಮಯದಲ್ಲಿ ಕವಿತಾಳಿನ ವೀರಣ್ಣ ಎಂಬುವರು ವೇದಿಕೆ ಬಳಿ ಬಂದು ತಾವು ಒಬ್ಬ ಸಿಮೆಂಟ್ ಕಳ್ಳ ಸಾಗಾಣಿಕೆಗಾರರಿಗೆ ಮಾಲೆಯನ್ನು ಹಾಕುತ್ತಿದ್ದೇನೆ ಎಂದು ಹೇಳಿದರು. ಸಚಿವರು ತಮ್ಮ ಭಾಷಣ ಸಮಯದಲ್ಲಿ ಈ ಆಪಾದನೆ ಸುಳ್ಳು ಎಂದು ಹೇಳಿದರು ವೀರಣ್ಣನವರು ಪ್ರೇಕ್ಷಕರ ಮಧ್ಯೆ ಎದ್ದುನಿಂತು ಪತ್ರಿಕೆಯೊಂದನ್ನು ಮೇಲೆತ್ತಿ ಈ ಪತ್ರಿಕೆಯಲ್ಲಿ ಆಪಾದನೆಗಳು ಪ್ರಕಟವಾಗಿರುವುದರಿಂದ ಅವೆಲ್ಲಾ ನಿಜ ಎಂದು ಮತ್ತೆ ಹೇಳಿದರು. ಆಗ ಸಭೆಯಲ್ಲಿರುವ ಬಸವರಾಜಪ್ಪ, ಸಿದ್ದರಾಮಪ್ಪ, ಅಮರಪ್ಪ ಇವರುಗಳು ವೀರಣ್ಣನವರಿಗೆ ಮತ್ತೆ ಬುದ್ಧಿ ಹೇಳಿದರು. ಆದರೂ ಮಾತಿನ ಚಕಮಕಿ ನಡೆದೇ ಇತ್ತು. ಬಸವರಾಜಪ್ಪನವರ ದೂರಿನ ಮೇಲೆ ಕವಿತಾಳ ಠಾಣೆಯ ಅಪರಾದ ಸಂಖ್ಯೆ ೪೭-೮೬ ಸೆಕ್ಷನ್ ೫೦೫, ೫೦೬ ಐ.ಪಿ.ಸಿ.ಪ್ರಕಾರ ವೀರಣ್ಣನವರ ಮೇಲೆ ಕೇಸನ್ನು ದಾಖಲು ಮಾಡಿಕೊಂಡು ತಾ॥ ೨೮-೭-೧೯೮೬ರಂದು ಸಂಜೆ ೭.೩೦ ಗಂಟೆಗೆ ಅವರನ್ನು ದಸ್ತಗಿರಿ ಮಾಡಲಾಯಿತು. ನಂತರ ಅವರನ್ನು ಮಾನ್ವಿ ಮ್ಯಾಜಿಸ್ಟ್ರೇಟ್‌ರ ಮುಂದೆ ಹಾಜರುಪಡಿಸಲಾಯಿತು. ಇದಾದಮೇಲೆ ತಾ॥ ೪-೮-೧೯೮೬ರ ಬೆಳಿಗ್ಗೆ ೧೦-೩೦ರ ಸಮಯದಲ್ಲಿ ವೀರಣ್ಣನವರು ಪೋಲೀಸ್ ಠಾಣೆಗೆ ದೂರೂದನ್ನಿತ್ತರು. ಆದರ ಪ್ರಕಾರ ಅವರು ತಾ ೨೮-೭-೧೯೮೬ ರಂದು ಹಾಸ್ಪೆಲ್‌ನ ಉದ್ಘಾಟನಾ ಸಮಯದಲ್ಲಿ ಸಚಿವರ ಬಗ್ಗೆ ಪತ್ರಿಕೆಯೊಂದರಲ್ಲಿ ಪ್ರಕಟಿತವಾದ ಆಪಾದನೆಗಳ ಬಗ್ಗೆ ಹೇಳಿದಾಗ ಕವಿತಾಳಿನ ಬಸವರಾಜಪ್ಪ ಹಾಗೂ ಹನ್ನೊಂದು ಜನ ಇತರರು ಅವರನ್ನು ಹೊಡೆದು ಅವರ ಬಳಿ ಇದ್ದ ನೂರು ರೂಪಾಯಿ ಹಾಗೂ ಎರಡು ತೊಲದ ಬಂಗಾರದ ಚೈನನ್ನು ಕಿತ್ತಿದ್ದಾರೆಂದು ಹೇಳಿದರು. ಈ ದೂರಿನ ಮೇಲೆ ಕವಿತಾಳ ಠಾಣೆಯಲ್ಲಿ ಅಪರಾಧ ಸಂಖ್ಯೆ ೪೮-೮೬ ಸೆಕ್ಷನ್ ೩೯೫ ಐ.ಪಿ.ಸಿ ಪ್ರಕಾರ ಕೇಸನ್ನು ದಾಖಲು ಮಾಡಿಕೊಳ್ಳಲಾಗಿದೆ. ಈ ಬಗ್ಗೆ ತನಿಖೆ ಮುಂದುವರಿಯುತ್ತಿದೆ.

ಶ್ರೀ ಕೆ. ಹೆಚ್. ಪಾಟೀಲ್. —ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು. —ನೀವು ಒಬ್ಬ ಸೀನಿಯರ್ ಮೆಂಬರ್ ಆಗಿ ಈ ಬಗ್ಗೆ ಪ್ರಶ್ನೆ ಹಾಕುತ್ತಿದ್ದೀರಿ.

SRI K. H. PATIL.—We would like to know the name of the Minister so that we will form some opinion,

ಅಧ್ಯಕ್ಷರು. —ಪಾಟೀಲ್‌ರವರೇ ತಾವು ಪ್ರಶ್ನೆ ಹಾಕುವುದಾದರೆ, ಈ ನಿಯಮ ೩೩ಳಿ ಎಂದೆ ನಾವು ಪಿತಕ್ಕೆ ಇಟ್ಟುಕೊಳ್ಳಬೇಕು ತೇಳಿ ನೋಡೋಣ.

SRI K H. PATIL.—Sir, It is not a simple matter of Call Attention or reply. Here a Minister has been involved.

ಅಧ್ಯಕ್ಷರು. —ನಿಯಮ ೩೩ಳಿರ ಅಡಿಯಲ್ಲಿ ಎಷ್ಟು ಪ್ರಶ್ನೆಗಳು ಬಂದರೂ ಸಹ ಅಷ್ಟಕ್ಕೂ ನಾವು ಉತ್ತರವನ್ನು ಸಚಿವರಿಂದ ಕೊಡಿಸುತ್ತಿದ್ದೇವೆ. ಆದರೂ ಮತ್ತೆ ತಾವು ಪ್ರಶ್ನೆ ಕೇಳುತ್ತಿದ್ದೀರಿ. ದಯವಿಟ್ಟು ಮತ್ತೆ ಪ್ರಶ್ನೆ ಕೇಳುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ—ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು. —ಖಾರ್ಗೆಯವರೇ ದಯವಿಟ್ಟು ಕೇಳಿ. ನಿಯಮ ೩೩ಳಿರ ಪ್ರಕಾರ ಎಷ್ಟು ಪ್ರಶ್ನೆಗಳು ಬರುತ್ತವೋ ಅಷ್ಟಕ್ಕೂ ನಾವು ಉತ್ತರ ಕೊಡಿಸುತ್ತಿದ್ದೇವೆ. ಇವತ್ತು ಬಹಳಷ್ಟು ಜನ ಮಂತ್ರಿಗಳು ಬಂದಿದ್ದಾರೆ. ಎಲ್ಲ ಸದಸ್ಯರ ಪ್ರಶ್ನೆಗಳಿಗೂ ಉತ್ತರ ಕೊಡಿಸೋಣ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು. —ದಯವಿಟ್ಟು ಎಲ್ಲರೂ ಕೂತುಕೊಳ್ಳಿ.

SRI K. H. PATIL.—We have got a right to request you.

ಅಧ್ಯಕ್ಷರು. —ನಿಯಮ ೩೩ಳಿ ಪ್ರಶ್ನೆಗೆ ಮತ್ತೆ ಉಪ ಪ್ರಶ್ನೆ ಬೇಡ.

SRI K. H. PATIL.—Let me express the views of the Opposition.

ಅಧ್ಯಕ್ಷರು. —ದಯವಿಟ್ಟು ಕೂತುಕೊಳ್ಳಿ ಮಾನ್ಯ ಇದಿನಬ್ಬನವರೇ ತಮ್ಮ ಪ್ರಶ್ನೆಯನ್ನು ಳಿ.

(ಲ) ದಕ್ಷಿಣ ಕನ್ನಡ ಜಿಲ್ಲೆಯ ಪಡುಬಿದ್ರಿಯಲ್ಲಿ ನಾಲ್ಕು ಪರ್ಮಿಸ್ ಬೋಟುಗಳನ್ನು ಸುಟ್ಟು ಹಾಕಿರುವ ಬಗ್ಗೆ.

ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ). —ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ನಾಡದೋಣಿಗಾರರ ಮತ್ತು ಪರ್ಮಿಸ್ ಬೋಟುಗಾರರ ಒಳಗೆ ಸಮತೆಸ್ಯೆ ಉದ್ಭವವಾಗಿ ಅವರಲ್ಲಿ ವಿರಸವುಂಟಾಗಿ ಸಮುದ್ರಕ್ಕೆ ಮೀನು ಹಿಡಿಯಲು ಯಾವ ತಾರೀಖಿಗೆ ಹೋಗಬೇಕೆಂಬ ಕುರಿತು ಒಳಜಗಳವಾಗಿರುವುದು ಗೊತ್ತಾಗಿದೆ. ಅದರ ಫಲಶ್ರುತಿಯಿಂದ ತಾ॥ ೧೭-೮-೧೯೮೬ರಂದು ಪಡುಬಿದ್ರಿ ಸಮೀಪ ನಾಲ್ಕು ಪರ್ಮಿಸ್ ಬೋಟುಗಳನ್ನು ಸುಟ್ಟುಹಾಕಲಾದ ವಿಚಾರ ತಿಳಿದುಬಂದಿದೆ. ಇದಕ್ಕಾಗಿ ಅನೇಕರನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ತಪ್ಪಿತಸ್ಥರಲ್ಲದವರೂ ಇದರಲ್ಲಿ ಸೇರಿದ್ದಾರೆಂದೂ, ಉಳ್ಳಾಲ ಬೆಂಗ್ರಿಯ ದೂರದ ಜಾಗದ ಕೆಲವರನ್ನೂ ದಸ್ತಗಿರಿ ಮಾಡಲಾಗಿದೆಯೆಂದೂ ತಿಳಿಯುತ್ತದೆ. ಈರೀತಿ ಎಷ್ಟು ಜನರನ್ನು ದಸ್ತಗಿರಿ ಮಾಡಲಾಗಿದೆ ? ಅವರನ್ನು ಬಿಡಂಗಡೆ ಮಾಡಲಾಗಿದೆಯೆ ಇದರ ವಿವರಣೆ ಏನು ಎಂಬ ಕುರಿತು ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು)—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಇದಿನಬ್ಬನವರು ಕೊಟ್ಟಿರತಕ್ಕ ನಿಯಮ ೩೩ಳಿಕ್ಕೆ ಈ ಕೆಳಕಂಡ ಉತ್ತರವನ್ನು ನೀಡಲು ನಾನು ತಮ ಅನುಮತಿಯನ್ನು ಕೋರುತ್ತೇನೆ.

ದಿನಾಂಕ ೧೩-೮-೧೯೮೬ರಂದು ಡೆಪ್ಯೂಟಿ ಕಮಿಷನರ್ ದಕ್ಷಿಣ ಕನ್ನಡ ರವರು ಬೆಸ್ತರು (ಮೀನು ಹಿಡಿಯುವವರು) ಕೊಟ್ಟ ಅರ್ಜಿಯ ಬಗ್ಗೆ ಒಂದು ಸಭೆಯನ್ನು ಏರ್ಪಡಿಸಿದ್ದರು